**O.S** 42/2010

**PW**-1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ **30.01.2024** ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ **4** ರಿಂದ **8** ನೇ ಪ್ರತಿವಾದಿಗಳ ಪರ ವಕೀಲರಾದಃ ಶ್ರೀ **JP** ರವರಿಂದ

ನನ್ನ ತಂದೆ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ, ಅವರಿಗೆ ಕತ್ತು ಮತ್ತು ಕಾಲು ನೋವು ಇರುತ್ತದೆ. ದಾವಾ ಆಸ್ತಿಗಳ ಚೆಕ್ಕುಬಂದಿ ನನಗೆ ಗೊತ್ತಿರುತ್ತದೆ. ಮೊದಲನೇ ದಾವಾ ಆಸ್ತಿಯು ಇಶ್ವರ ಗೌಡನ ಹಳ್ಳಿಯಲ್ಲಿ ಇರುತ್ತದೆ. ಇಶ್ವರ ಗೌಡನ ಹಳ್ಳಿಯಲ್ಲಿ ನಂಜನಗೂಡು ತಾಲೂಕು ಮೈಸೂರು ಜಿಲ್ಲೆಗೆ ಸೇರಿರುತ್ತದೆ. 2 ನೇ ದಾವಾ ಆಸ್ತಿಯು ಸಂತೇಮರಹಳ್ಳಿ ಹೋಬಳಿ ಚಾಮರಾಜನಗರ ಜಿಲ್ಲೆಗೆ ಸೇರಿರುತ್ತದೆ. ನನ್ನ ತಾತ ಬಸಪ್ಪ ರವರು ದಾವಾ ಆಸ್ತಿಗಳನ್ನು ಸಿದ್ದರಾಜಪ್ಪರವರಿಗೆ 8 ವರ್ಷಗಳ ಕಾಲದ ವರೆಗೆ ಭೋಗ್ಯ ಮಾಡಿದ್ದರು. ಅರ್ಜಿ ನಂಜಪ್ಪ ನನಗೆ ಮುತ್ತಾತನಾಗಬೇಕು ಅವರಿಗೆ 3 ಜನ ಮಕ್ಕಳು. ಅರ್ಜಿ ನಂಜಪ್ಪ ರವರ ಮಕ್ಕಳ ಹೆಸರು ಚೆನ್ನಬಸಮ್ಮ, ಬಸಪ್ಪ ಮತ್ತು ಸಿದ್ದರಾಜಪ್ಪ. ಬಸಪ್ಪ ರವರು ಪೊಲೀಸ್ ಇಲಾಖೆಯಲ್ಲಿ ಪೇದೆಯಾಗಿದ್ದರು ಎಂದರೆ ನಿಜ. ಬಸಪ್ಪನ ಹೆಂಡತಿಯ ಹೆಸರು ರುದ್ರಮ್ಮ. ಬಸಪ್ಪನ ಹೆಂಡತಿಯ ಹೆಸರು ಪುಟ್ಟಮ್ಮ ಎಂದರೆ ಸರಿಯಲ್ಲ. ಬಸಪ್ಪ ಮತ್ತು ಪುಟ್ಟಮ್ಮ ರವರಿಗೆ ಜನಿಸಿದ್ದವರೇ ಎನ್.ಬಿ ಶಿವಣ್ಣ ಎಂದರೆ ಸರಿಯಲ್ಲ.

ಸಿದ್ದರಾಜಪ್ಪನವರ ಹೆಂಡತಿ ಹೆಸರು ಸುಬ್ಬಮ್ಮ. ಸಿದ್ದರಾಜಪ್ಪ ರವರಿಗೆ 3 ಜನ ಮಕ್ಕಳು, ಅವರುಗಳ ಹೆಸರು ಮಹದೇವಪ್ಪ, ಜಯಮ್ಮ ಮತ್ತು ಸೋಮಣ್ಣ. ಬಸಪ್ಪ ಇವರಿಗೆ ಎನ್.ಬಿ ಶಿವಣ್ಣ ಎಂಬ ಒಬ್ಬನೇ ಮಗ ಇದ್ದಾ ಎಂದರೆ ಸರಿಯಲ್ಲ. ನನ್ನ ತಂದೆ ಪ್ರಭುಸ್ವಾಮಿ ಬಸಪ್ಪನ ಮಗನಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಜೊತೆ ನನ್ನ ತಾತ ಮನೆ ಮತ್ತು ಇತ್ತಲು ಜಾಗಗಳನ್ನು ಸಹ ಭೋಗ್ಯಕ್ಕೆ ಹಾಕಿದ್ದರು. ಮನೆ ಮತ್ತು ಇತ್ತಲು ಜಾಗಗಳನ್ನು ಸಹ ಈ ದಾವೆಯಲ್ಲಿ ಸೇರಿಸಲಾಗಿರುತ್ತದೆ. ಭೋಗ್ಯ ಹಾಕಿದ್ದ ದಾವಾ ಆಸ್ತಿಗಳನ್ನು ಎನ್.ಬಿ ಶಿವಣ್ಣನವರು ದಿನಾಂಕ 25.10.1971 ರಂದೇ ಭೋಗ್ಯ ತೀರುವಳಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಭೋಗ್ಯದ ಅಸಲು ಪತ್ರ ಎನ್.ಬಿ ಶಿವಣ್ಣನವರ ಬಳಿ ಇದೆ ಎಂದರೆ ಸರಿಯಲ್ಲ. ಭೋಗ್ಯ ತೀರುವಳಿ ಆದ ನಂತರ ದಾವಾ ಆಸ್ತಿಯ ಕಂದಾಯ ದಾಖಲಾತಿಗಳಲ್ಲಿ ಎನ್.ಬಿ ಶಿವಣ್ಣನವರ ಹೆಸರು ಬರುತ್ತಿತ್ತು ಎಂದರೆ ಸರಿಯಲ್ಲ.

1985–86 ನೇ ಸಾಲಿನಲ್ಲೇ ಎನ್.ಬಿ ಶಿವಣ್ಣನವರ ಹೆಸರು ದಾವಾ ಆಸ್ತಿಗಳ ಕಂದಾಯ ದಾಖಲಾತಿಗಳಲ್ಲಿ ಬರಲು ಪ್ರಾರಂಭಿಸಿರುತ್ತದೆ ಎಂದರೆ ಸರಿಯಲ್ಲ. ನಾನು 10 ನೇ ತರಗತಿ ವರೆಗೆ ವಿಧ್ಯಾಭ್ಯಾಸವನ್ನು ಮಾಡಿರುತ್ತೇನೆ. ನಾನು ಎನ್.ಬಿ ಶಿವಣ್ಣನವರ ಹೆಸರಿನಲ್ಲಿ ಬರುತ್ತಿತ್ತು ಎನ್ನಲಾದ ದಾವಾ ಆಸ್ತಿಗಳಿಗೆ ಸಂಬಂದಿಸಿದ ಕಂದಾಯ ದಾಖಲಾತಿಗಳನ್ನು ನೋಡಿರುವುದಿಲ್ಲ. ನಿಪಿ–3 2 ನೇ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆ ಎಂದರೆ ನಿಜ. ನಿಪಿ–4 1 ನೇ ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆ ಎಂದರೆ ನಿಜ. ದಿನಾಂಕ 25.10.1971 ರಂದು ಭೋಗ್ಯ ತೀರುವಳಿ ಆಗಿದ್ದರೂ ಸಹ ಭೋಗ್ಯ ತೀರುವಳಿ ಆಗಿರುವುದಿಲ್ಲ ಎಂದು ಹೇಳಿ ನನ್ನ ತಂದೆ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದರಾಜಪ್ಪನವರು 1971 ನೇ ಸಾಲಿನಲ್ಲಿ ಬದುಕಿರಲಿಲ್ಲ ಎಂದರೆ ನಿಜ. ಸದರಿ ಸಾಲಿನಲ್ಲಿ 1 ನೇ ಪ್ರತಿವಾದಿ ಮತ್ತು ಅವರ ತಾಯಿ ಸುಬ್ಬಮ್ಮ ಇವರು ಸೇರಿ ಎನ್.ಬಿ ಶಿವಣ್ಣರವರಿಂದ ಭೋಗ್ಯದ ಬಾಕಿ ಹಣವನ್ನು ಪಡೆದುಕೊಂಡು ಭೋಗ್ಯ ತೀರುವಳಿಯನ್ನು ಮಾಡಿ ಅಸಲು ಭೋಗ್ಯ ಪತ್ರದಲ್ಲಿ ಷರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 25.10.1971 ರಿಂದ ಅಂದರೆ ಭೋಗ್ಯ ತೀರುವಳಿ ಮಾಡಿಕೊಂಡ ನಂತರ ಎನ್.ಬಿ ಶಿವಣ್ಣರವರು ದಾವಾ ಆಸ್ತಿಯ ಸ್ವಾಧೀನದಲ್ಲ ಇದ್ದು ವ್ಯವಸಾಯವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಎನ್.ಬಿ ಶಿವಣ್ಣರವರು ತಮ್ಮ ಜೀವಿತಾವದಿಯಲ್ಲಿ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ ನಂತರ 4 ರಿಂದ 8 ನೇ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಿದ್ದರಾಜಪ್ಪ ರವರ ಕುಟುಂಬದವರು ದಾವಾ ಆಸ್ತಿಯ ಸ್ವಾಧೀನಗಳಲ್ಲಿ ಇಲ್ಲಾ ಎಂದು ಸೂಚಿಸಿದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಸೇರಿ ಚಾಮರಾಜನಗರದ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ OS No.212/2001 ರಂತೆ ಎನ್.ಬಿ ಶಿವಣ್ಣನವರ ವಿರುದ್ಧವಾಗಿ ನಿರ್ಭಂದಕಾಜ್ಞೆಗಾಗಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ವಜವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಗಳಿಗೂ ಹಾಗೂ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಸೇರಿ 1 ರಿಂದ 3 ನೇ ಪ್ರತಿವಾದಿಗಳಿಗೆ ತಪ್ಪು ಮಾಹಿತಿ ನೀಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದೆ ಇರುವ ಹಾಗೆ ದಿಕ್ಕು ತಪ್ಪಿಸಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿದ್ದರೆ ಸತ್ಯಸಂಗತಿ ಬೆಳಕಿಗೆ ಬರುತ್ತಿತ್ತು ಎಂದರೆ ನಿಜ. ನಾವು 1 ರಿಂದ 3 ನೇ ಪ್ರತಿವಾದಿಗಳ ದಿಕ್ಕು ತಪ್ಪಿಸಿ ಅವರಿಗೆ ಗೊತ್ತಾಗದೆ ಇರುವ ಹಾಗೆ ಈ ಹಿಂದೆ ಡಿಕ್ರಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಅಮಲುಜಾರಿ ಸಂಖ್ಯೆ 159/2012 ನ್ನು ಇದೇ ನ್ಯಾಯಾಲಯದಲ್ಲಿ ನನ್ನ ತಂದೆ ವಾದಿಯು ಹಾಕಿರುತ್ತಾರೆ ಎಂದರೆ ನಿಜ. ಮೇಲೆ ಹೇಳಿದ

ಅಮಲುಜಾರಿ ಸಂಖ್ಯೆ 159/2012 ನ್ನು ಹೂಡಿದ ನಂತರ ಈ ವಿಚಾರ ಎನ್.ಬಿ ಶಿವಣ್ಣರವರಿಗೆ ತಿಳಿದಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಅಮಲು ಜಾರಿ ಸಂಖ್ಯೆ 159/2012 ನ್ನು ತಿಳಿದುಕೊಂಡ ನಂತರ ಎನ್.ಬಿ ಶಿವಣ್ಣನವರು ಸದರಿ ಪ್ರಕರಣದಲ್ಲಿ ಪಕ್ಷಗಾರರಾಗಿರುತ್ತಾರೆ ಎಂದರೆ ನಿಜ. ಸದರಿ ಅಮಲು ಜಾರಿ ಪ್ರಕರಣದಲ್ಲಿ ಎನ್.ಬಿ ಶಿವಣ್ಣನವರ ವಿಚಾರಣೆಯಾಗಿರುತ್ತದೆ ಎಂದರೆ ನಿಜ. ಸದರಿ ಪ್ರಕರಣದಲ್ಲಿ ಎನ್.ಬಿ ಶಿವಣ್ಣನವರು ದಾವಾ ಆಸ್ತಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಮಲು ಜಾರಿ ಪ್ರಕರಣವು ಚಾಲ್ತಿಯಲ್ಲಿ ಇದ್ದಾಗ ಎನ್.ಬಿ ಶಿವಣ್ಣನವರು RA No.21/2014 ರಂತೆ ಅಸಲು ದಾವಾ ಸಂಖ್ಯೆ 42/2010 ರ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಇರಬಹುದು.

ದಿನಾಂಕ 08.02.2021 ರಲ್ಲಿ ಎನ್.ಬಿ ಶಿವಣ್ಣನವರು ಮೃತ ಪಟ್ಟಿರುತ್ತಾರೆ ಎಂದರೆ ನಿಜ. ಪ್ರತಿವಾದಿ ನಂ.4 ರಿಂದ 8 ರವರು ಎನ್.ಬಿ ಶಿವಣ್ಣನವರ ಕಾನೂನು ಬದ್ಧವಾರಸುದಾರರು ಎಂದರೆ ಇರಬಹುದು. ನಿಪಿ-2 ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ನ್ನು ನನ್ನ ತಂದೆ ಮತ್ತು ನಾನು ಸೇರಿ ಬರೆಯಿಸಿರುತ್ತೇವೆ. ನಿಪಿ-2 ನ್ನು ಬರೆಯುವ ಸಂದರ್ಭದಲ್ಲಿ ಮಹಜರ್ ಮಾಡಲಾಗಿರುತ್ತದೆ.

ಬಸಪ್ಪರವರಿಗೆ ಇಬ್ಬರು ಹೆಂಡತಿಯವರು ಅವರ ಹೆಸರು ರುದ್ರಮ್ಮ ಮತ್ತು ಸಣ್ಣಮ್ಮ. ಬಸಪ್ಪರವರಿಗೆ ಇಬ್ಬರು ಹೆಂಡತಿಯರು ಇರಲಿಲ್ಲಾ ಎಂದರೆ ಸರಿಯಲ್ಲ. ಬಸಪ್ಪ ರವರಿಗೆ ಒಬ್ಬರೆ ಹೆಂಡತಿ ಇದ್ದಿದ್ದು ಅವರ ಹೆಸರು ಪುಟ್ಟಮ್ಮ ಎಂದರೆ ಸರಿಯಲ್ಲ. ಬಸಪ್ಪ ಮತ್ತು ಪುಟ್ಟಮ್ಮ ದಂಪತಿಗಳ ಮಗನೇ ಎನ್.ಬಿ ಶಿವಣ್ಣ ಎಂದರೆ ಸರಿಯಲ್ಲ. ನಿಪಿ-8 ನ್ನು ಸುಳ್ಳು ಅಂಶಗಳ ಆಧಾರದ ಮೇರೆಗೆ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-8 ನ್ನು ಅಂಚೆಯ ಮುಖಾಂತರ ಕಳುಹಿಸಿ ಅಂಚೆ ಇಲಾಖೆಯ ಸಿಬ್ಬಂದಿಗಳೊಂದಿಗೆ ನಾನು ಮತ್ತು ನನ್ನ ತಂದೆಯು ಶಾಮಿಲಾಗಿ ನಿಪಿ-8 ನ್ನು ಪ್ರತಿವಾದಿಗಳು ಸ್ವೀಕರಿಸದೇ ಇರುವ ಹಾಗೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಎನ್.ಬಿ ಶಿವಣ್ಣನವರ ಹೆಸರಿಗೆ 1984-85 ನೇ ಸಾಲಿನಲ್ಲಿ ನಿಪಿ-12 ರಂತೆ ಖಾತೆಯಾಗಿರುವ ವಿಚಾರ ನನ್ನ ತಂದೆಗೆ ಆಗಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಖಾತೆಯ ವಿಚಾರವಾಗಿ ತಹಸಿಲ್ದಾರ್ ಕಛೇರಿಯಲ್ಲಾಗಲೀ ಅಥವಾ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಾಗಲಿ ನಾವು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. 2007 ನೇ ಸಾಲಿನ ನಂತರ ನಾನು ನಿಪಿ-12 ನ್ನು ಪಡೆದುಕೊಂಡಿರುತ್ತೇನೆ.

(ಈ ಹಂತದಲ್ಲಿ 4 ರಿಂದ 8 ನೇ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

30.01.2024.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.